**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ., ನ್ಯಾಯಾಲಯ, ಧಾರವಾಡ**

**ಸಿಸಿ ನಂಃ 2937/2019**

| | | |
|---|---|---|
| ಫಿರ್ಯಾದಿ | : | ಕರ್ನಾಟಕ ಸರ್ಕಾರದ ಪರ<br>(ಧಾರವಾಡ ವಿದ್ಯಾಗಿರಿ ಆರಕ್ಷಕ ಠಾಣೆ) |
| | | -ವಿರುದ್ಧ- |
| ಆರೋಪಿತರು | 1. | ಮಂಜುನಾಥ ಅರ್ಜುನ ಹುಲ್ಲೂರ @ ಮಂಜ್ಯಾ<br>ವಯಾಃ 19 ವರ್ಷ, ಉಃ ಕಾರ್ಮಿಕ<br>ಸಾಃ ಉರ್ದು ಸ್ಕೂಲ ಹತ್ತಿರ, ಲಕ್ಷ್ಮಿಸಿಂಗನಕೇರಿ, ಧಾರವಾಡ |
| | 2. | ಶಾನು ರೆಹಮಾನಸಾಬ ಹಾಳಭಾವಿ<br>ವಯಾಃ 23 ವರ್ಷ, ಉಃ ಕಾರ್ಮಿಕ<br>ಸಾಃ ಲಕ್ಷ್ಮಿಸಿಂಗನಕೇರಿ, ಧಾರವಾಡ<br>**(Split up)** |
| | 3. | ರಾಜು ರಾಮಣ್ಣ ಅಮ್ಮಿನಬಾವಿ @ ಗುಡ್ಡಾ ರಾಜಾ<br>ವಯಾಃ 22 ವರ್ಷ, ಉಃ ಗೌಂಡಿ ಕೆಲಸ,<br>ಸಾಃ ಲಕ್ಷ್ಮಿಸಿಂಗನಕೇರಿ, ಧಾರವಾಡ. |

**ದೋಷಾರೋಪಣೆ**

ಶ್ರೀ ಮಹೇಶ ಚಂದ್ರಕಾಂತ 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ., ನ್ಯಾಯಾಲಯ ಧಾರವಾಡ ಆದ ನಾನು ಈ ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಇಡುವ ದೋಷಾರೋಪಣೆಗಳೆಂದರೆ:-

ಮೊದಲನೇಯದಾಗಿ, ದಿನಾಂಕಃ 01.06.2019 ರಂದು ರಾತ್ರಿ 08.00 ಗಂಟೆಯ ಸುಮಾರಿಗೆ, ಧಾರವಾಡದ ವಿದ್ಯಾಗಿರಿ ಪೋಲಿಸ್ ಠಾಣೆಯ ವ್ಯಾಪ್ತಿಯ ಜೆ.ಎಸ್.ಎಸ್. ಕಾಲೇಜ ಹಿಂಭಾಗದಲ್ಲಿರುವ ದಾನೇಶ್ವರ ನಗರ ಹತ್ತಿರ ಇರುವ ವೀರಭದ್ರೇಶ್ವರ ಪಾರ್ಕದಲ್ಲಿರುವ ಪ್ಲಾಟ್ ನಂ.15 ರಲ್ಲಿರುವ ಫಿರ್ಯಾದಿಯವರ ಮನೆಯ ಮುಂಬಾಗಿಲಕ್ಕೆ ಕೀಲಿ ಹಾಕಿದ್ದನ್ನು ಮತ್ತು ಆಗ ಕರೆಂಟ ಹೋಗಿದ್ದನ್ನು ನೀವು ಆರೋಪಿತರು ನೋಡಿ, ನಿಮ್ಮ ಸಮಾನ ಮನಸ್ಸಿನಿಂದ, ನೀನು ಆರೋಪಿ ನಂ.3 ನೇದವನು ರಸ್ತೆಯಲ್ಲಿ ಬರ ಹೋಗುವವರನ್ನು ವಾಚ್ ಮಾಡುತ್ತಾ ನಿಂತಾಗ, ನೀವು ಆರೋಪಿ ನಂ.1 ಮತ್ತು 2 ನೇದವರು ಸದರಿ ಮನೆಯ ಕಂಪೌಂಡ ಜಿಗಿದು ಒಳಗೆ ಹೋಗಿ, ಜಪ್ತಾದ ಕಬ್ಬಿಣದ ರಾಡಿನಿಂದ ಮನೆಯ ಮುಂಬಾಗಿಲಕ್ಕೆ ಹಾಕಿದ ಕೀಲಿಯನ್ನು ಮೀಟಿ ತೆರೆದು, ಒಳಗೆ ಅಕ್ರಮ ಪ್ರವೇಶ ಮಾಡಿ ಆ ಮೂಲಕ ನೀವೆಲ್ಲರೂ ಭಾರತೀಯ ದಂಡ ಸಂಹಿತೆ ಕಲಂ **457** ಸಹ ಕಲಂ **34** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ?

ಕೊನೆಯದಾಗಿ ಅದೇ ದಿನ, ಅದೇ ಸ್ಥಳ ಹಾಗೂ ಅದೇ ಸಮಯದಲ್ಲಿ ಆರೋಪಿತರಾದ ನೀವು ನಿಮ್ಮ ಸಮಾನ ಮನಸ್ಸಿನಿಂದ, ಸದರಿ ಫಿರ್ಯಾದುದಾರರ ಮನೆಯಲ್ಲಿ ಅಕ್ರಮ ಪ್ರವೇಶ ಮಾಡಿ, ಮನೆಯ ಹಿತ್ತಲ ಬಾಗಿಲವನ್ನು ತೆರೆದು ಮುಂಬಾಗಿಲದ ಒಳ ಟಾವರ ಬೋಲ್ಟನ್ನು ಹಾಕಿ ನಂತರ ಮನೆಯ ಬೆಡರೂಮದಲ್ಲಿದ್ದ ಅಲ್ಮೇರಾವನ್ನು ನೆಲಕ್ಕೆ ಕೆಡವಿ ಕಬ್ಬಿಣದ ರಾಡಿನಿಂದ ಬಾಗಿಲವನ್ನು ಮೀಟಿ ಒಂದು ಕದವನ್ನು ಕಿತ್ತು ತೆಗೆದು ಲುಕ್ಸಾನಪಡಿಸಿ, ಅದರಲ್ಲಿಯ ಸೇಪ ಲಾಕರದಲ್ಲಿದ್ದ ಒಟ್ಟು 89 ಗ್ರಾಂ ತೂಕದ ಬಂಗಾರದ ಆಭರಣಗಳು ಇವುಗಳ ಒಟ್ಟು ಅಂದಾಜು ಬೆಲೆ ರೂ.2,78,400/- ನೇದ್ದವುಗಳನ್ನು ಕಳ್ಳತನ ಮಾಡಿಕೊಂಡು ಮನೆಯ ಮುಂಬಾಗಿಲಕ್ಕೆ ಕೀಲಿಯನ್ನು ಪ್ರೆಸ ಮಾಡಿಕೊಂಡು ಹೋಗಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ **380** ಸಹ ಕಲಂ-**34** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ?

ಆದ್ದರಿಂದ ಈ ಮೇಲೆ ಹೇಳಿದ ದೋಷಾರೋಪಣೆಯ ಬಗ್ಗೆ ಆರೋಪಿಗಳಾದ ನೀವು ಈ ನ್ಯಾಯಾಲಯದ ವಿಚಾರಣೆಗೆ ಒಳಪಡಬೇಕಾಗಿ ನಿರ್ದೇಶಿಸುತ್ತೇನೆ.

*(ಮೇಲಿನ ದೋಷಾರೋಪಣೆಯನ್ನು ಆರೋಪಿತರಿಗೆ ಅವರಿಗೆ ತಿಳಿಯುವ ಭಾಷೆಯಾದ ಕನ್ನಡದಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರು ನೀಡಿರುವ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು.)*

ಧಾರವಾಡ
ದಿನಾಂಕಃ 27.06.2023

(ಮಹೇಶ ಚಂದ್ರಕಾಂತ)
3 ನೇ ಹೆ ಹಿ ದಿ ನ್ಯಾಯಿಕ ದಂಡಾಧಿಕಾರಿಗಳವರ
ನ್ಯಾಯಾಲಯ, ಧಾರವಾಡ.

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ., ನ್ಯಾಯಾಲಯ, ಧಾರವಾಡ**

**ಸಿಸಿ ನಂಃ 2937/2019**

ಫಿರ್ಯಾದಿ : ಕರ್ನಾಟಕ ಸರ್ಕಾರದ ಪರ
(ಧಾರವಾಡ ವಿದ್ಯಾಗಿರಿ ಆರಕ್ಷಕ ಠಾಣೆ)

-ವಿರುದ್ಧ-

ಆರೋಪಿತರು 1 ಮಂಜುನಾಥ ಅರ್ಜುನ ಹುಲ್ಲೂರ

:ಆಪಾದನೆ:

ಪ್ರಶ್ನೆ : ಮೇಲೆ ಓದಿ ಹೇಳಿದ ಆರೋಪಣೆ ತಿಳಿಯಿತೇ?

ಉತ್ತರ : ಹೌದು

ಪ್ರಶ್ನೆ : ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗ ಬಯಸುತ್ತೀರಾ?

ಉತ್ತರ : ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು

(ಮೇಲಿನ ಉತ್ತರವನ್ನು ಆರೋಪಿತರ ಹೇಳಿಕೆಯಂತೆ ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಯಿತು)

ಧಾರವಾಡ
ದಿನಾಂಕಃ 27.06.2023

3 ನೇ ಹೆ ಹಿ ದಿ ನ್ಯಾಯಾಧೀಶರು ಹಾಗೂ
ಸಿಜೆಎಂ., ಧಾರವಾಡ.

ಆರೋಪಿತರ ಸಹಿ

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ., ನ್ಯಾಯಾಲಯ, ಧಾರವಾಡ**

**ಸಿಸಿ ನಂಃ 2937/2019**

ಫಿರ್ಯಾದಿ : ಕರ್ನಾಟಕ ಸರ್ಕಾರದ ಪರ
(ಧಾರವಾಡ ವಿದ್ಯಾಗಿರಿ ಆರಕ್ಷಕ ಠಾಣೆ)

-ವಿರುದ್ಧ-

ಆರೋಪಿತರು 3 ರಾಜು ರಾಮಣ್ಣ ಅಮ್ಮಿನಬಾವಿ @ ಗುಡ್ಡಾರಾಜಾ

:ಆಪಾದನೆ:

ಪ್ರಶ್ನೆ : ಮೇಲೆ ಓದಿ ಹೇಳಿದ ಆರೋಪಣೆ ತಿಳಿಯಿತೇ?

ಉತ್ತರ : ಹೌದು

ಪ್ರಶ್ನೆ : ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗ ಬಯಸುತ್ತೀರಾ?

ಉತ್ತರ : ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು

(ಮೇಲಿನ ಉತ್ತರವನ್ನು ಆರೋಪಿತರ ಹೇಳಿಕೆಯಂತೆ ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಯಿತು)

ಧಾರವಾಡ
ದಿನಾಂಕಃ 27.06.2023

3 ನೇ ಹೆ ಹಿ ದಿ ನ್ಯಾಯಾಧೀಶರು ಹಾಗೂ
ಸಿಜೆಎಂ., ಧಾರವಾಡ.

ಆರೋಪಿತರ ಸಹಿ